# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

ಸಿಸಿ ನಂ.832/2022

ಚಾಸಾ- 01 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27.12.2022

| | |
|---|---|
| ಹೆಸರು | ಃ ಡಾಃ ಸುಶೀಲಕುಮಾರ |
| ತಂದೆಯ ಹೆಸರು | ಃ ಪಾಂಡುರಂಗ ಅಂಬೂರೆ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ತಾಲೂಕ ಆರೋಗ್ಯ ವೈಧ್ಯಾಧಿಕಾರಿ ಆಳಂದ |
| ವಾಸಸ್ಥಳ | ಃ ಆಳಂದ |

ಃ ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ದಿನಾಂಕ 11.05.2021 ರಿಂದ 15.09.2021 ರ ವರೆಗೆ ಅಫಜಲಪೂರ ಸರಕಾರಿ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತೇನೆ.

ಚಾಸಾ-4 ರವರು ತಾಲೂಕ ಆರೋಗ್ಯ ಅಧಿಕಾರಿ ಅಫಜಲಪೂರ ಇರುತ್ತಾರೆ. ಚಾಸಾ-3 ರವರು ಕಂಪ್ಯೂಟರ ಆಪರೇಟರ ಎಂದು ಅಫಜಲಪೂರ ಸರಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಚಾಸಾ-2 ರವರು ಆರೋಗ್ಯ ನಿರೀಕ್ಷಣಾ ಅಧಿಕಾರಿಯಾಗಿ ಗೊಬ್ಬರ(ಬಿ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ದಿನಾಂಕ 05.08.2021 ರಂದು ನಾನು ದಿನ ನಿತ್ಯದ ಕರ್ತವ್ಯದಲ್ಲಿದ್ದಾಗ ಬೆಳಗ್ಗೆ ಸಂಗಮೇಶ ಟಕ್ಕಳಕಿ ಎಲಬು ಮತ್ತು ಕೀಲು ತಜ್ಞ ಸರಕಾರಿ ಆಸ್ಪತ್ರೆ ಅಫಜಲಪೂರ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿ ತಮ್ಮ ಖಾಸಗಿ ಆಸ್ಪತ್ರೆಯಲ್ಲಿ ಅಂದರೆ ಮನೆಯಲ್ಲಿ ಡಾಃಸಂಗಮೇಶ ಟಕ್ಕಳಕಿ ಕ್ಲಿನಿಕನಲ್ಲಿ ರೋಗಿಗಳ ತಪಾಣಸೆ ಮಾಡುತ್ತಿದ್ದರು.

ದಿ:05.08.2021 ರಂದು ರೋಗಿಗಳು ಎಲಬು ಮತ್ತು ಕೀಲು ತಜ್ಞ ಸರಕಾರಿ ಆಸ್ಪತ್ರೆ ಅಫಜಲಪೂರ ಹೊರ ರೋಗಿ ಕೋಠಡಿಯಲ್ಲಿ ವೈದ್ಯಾಧಿಕಾರಯಾದ ಸಂಗಮೇಶ ಟಕ್ಕಳಕಿ ರವರು ತಮ್ಮ ಕರ್ತವ್ಯದಲ್ಲಿ ಇರುವುದಿಲ್ಲ ಎಂದು ರೋಗಿಗಳು ಬಂದು ಮಾಹಿತಿ ನೀಡಿರುತ್ತಾರೆ . ಈ ವಿಷಯ ಕುರಿತು ಡಾ:ಸಂಗಮೇಶ ಟಕ್ಕಳಕಿ ರವರಿಗೆ ದೂರವಾಣಿ ಕರೆ ಮಾಡಿದ ನಂತರ ಸದರಿ ದೂರನ್ನು ಸ್ವೀಕರಿಸಿರುವುದಿಲ್ಲ. ರೋಗಿಗಳು ಆಸ್ಪತ್ರೆಗೆ ಬಂದು ನಮಗೆ ಹಾಗೂ ವೈದ್ಯಾಧಿಕಾರಿಗಳಿಗೆ ಬೈಯುತ್ತಿದ್ದರು. ಅದೇ ದಿನ ಸುಮಾರು 12.20 ಗಂಟೆಗೆ ನಾನು, ಚಾಸಾ-3 ರಿಂದ 5 ರವರು ಕೂಡಿಕೊಂಡು ಸಂಗಮೇಶ ಟಕ್ಕಳಕಿ ರವರು ನಡೆಸುತ್ತಿರುವ ಖಾಸಗಿ ಆಸ್ಪತ್ರೆಗೆ ಹೋಗಿ ಭೇಟಿ ನೀಡಿರುತ್ತೇವೆ. ಸದರಿ ಖಾಸಗಿ ಆಸ್ಪತ್ರೆಯಲ್ಲಿ ಸಂಗಮೇಶ ಟಕ್ಕಳಕಿ ರವರು ರೋಗಿಗಳಿಗೆ ತಪಾಸಣೆ ಮಾಡಿ ಚಿಕಿತ್ಸೆ ನೀಡಿರುತ್ತಿರುವುದನ್ನು ನಮಗೆ ಕಂಡು ಬಂದಿರುತ್ತದೆ . ಆಗ ನಾವು ಸದರಿ ಸಂಗಮೇಶ ಟಕ್ಕಳಕಿ ರವರು ನಡೆಸುತ್ತಿರವ ಖಾಸಗಿ ಆಸ್ಪತ್ರೆಯಲ್ಲಿ ರೋಗಿಯ ತಪಾಸಣೆ ಹಾಗೂ ಚಿಕಿತ್ಸೆ ನೀಡುವುದನ್ನು ವಿಡಿಯೋಗ್ರಾಫ ಮಾಡಲು ಹೋದಾಗ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯಾದ ಬಸವರಾಜ ಉಪ್ಪಾರ ರವರು ತಡೆ ಹಿಡಿದಿರುತ್ತಾರೆ. ಮತ್ತು ನಾನು ವಿಡಿಯೋಗ್ರಾಫ ಮಾಡಲು ಹೋದಾಗ ನನ್ನನ್ನು ಸಹಾ ತಡೆದು ಇಲ್ಲಿಂದ ನೀವು ಜೀವಂತ ಹೋಗುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ನಮ್ಮನ್ನು ಹೊರಗೆ ಹಾಕಿರುತ್ತಾರೆ. ಸದರಿ ದಿನದಂದು ನಾನು ಸರಕಾರಿ ಕೆಲಸದಲ್ಲಿ ಇದ್ದು ನನ್ನ ಕರ್ತವ್ಯಕ್ಕೆ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ಅಡೆ-ತಡೆ ಮಾಡಿರುತ್ತಾರೆ. ಸದರಿ ದಿನಾಂಕದಂದು ಫಿರ್ಯಾದಿ ರವರು ಸಂಗಮೇಶ ಟಕ್ಕಳಕಿ ರವರ ಆಸ್ಪತ್ರೆಯಲ್ಲಿ ಕರ್ತವ್ಯ ಮಾಡುತ್ತಿರುವುದನ್ನು ಸೆರೆ ಹಿಡಿದ ವಿಡಿಯೋಗ್ರಾಫನ ಸುಮಾರು ಅಂದಾಜು ಒಂದು ನಿಮಿಷ ಕಾಲದ ವಿಡಿಯೋಗ್ರಾಫ ಮಾಡಿದ ಸಿಡಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಅದನ್ನು ತನ್ನ ಪರವಾಗಿ ನಿಶಾನೆಗೊಳಿಸಲು ಮನವಿ ಮಾಡಿರುತ್ತಾರೆ. (ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಸಿಡಿಯನ್ನು ನಿಶಾನೆಗೊಳಿಸಲು ತಕರಾರು ವ್ಯಕ್ತ ಪಡಿಸಿರುತ್ತಾರೆ. ಆದ್ದರಿಂದ ಸದರಿ ಸಿಡಿಯನ್ನು ತಕರಾರಿಗೆ ಒಳಪಡಿಸಿ ಸದರಿ ಸಿಡಿಯನ್ನು ನಿಪಿ-**1** ಎಂದು ಗುರುತಿಸಲಾಯಿತು ).

ಆ ಸಂದರ್ಭದಲ್ಲಿ ಕೋವಿಡ-19 ಸಾಂಕ್ರಾಮಿಕ ಇರುವುದ್ದರಿಂದ ಅಫಜಲಪೂರ ಸರಕಾರಿ ಆಸ್ಪತ್ರೆಗೆ ಮರಳಿ ಹೋಗಿ ರೋಗಿಗಳ ತಪಾಸಣೆಯಲ್ಲಿ ನಿರತರಾಗಿರುತ್ತೇನೆ.

ಆಸ್ಪತ್ರೆಯಲ್ಲಿ ಕೆಲಸ ಒತ್ತಡ ಹೆಚ್ಚಾಗಿದರಿಂದ ಮರುದಿನ ಸಾಯಂಕಾಲ ಅಫಜಲಪೂರ ಪೋಲಿಸ ಠಾಣೆಗೆ ಹಾಜರಾಗಿ ಆರೋಪಿ ವಿರುದ್ಧ ಒಂದು ಲಿಖಿತ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಲಿಖಿತ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-2** ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ**-2(**ಎ**)** ಎಂದು ಗುರುತಿಸಲಾಯಿತು.

ನಂತರ ಪೋಲಿಸರು ನನ್ನನ್ನು ದಿಃ07.08.2021 ರಂದು ಠಾಣೆಗೆ ಕರೆಯಿಸಿ ನನ್ನನ್ನು ಘಟನೆ ನಡೆದ ಸ್ಥಳವನ್ನು ತೋರಿಸುವಂತೆ ಕೇಳಿದ್ದರಿಂದ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಘಟನಾ ಸ್ಥಳವನ್ನು ತೋರಿಸಿರುತ್ತೇನೆ.

ನಾನು ತೋರಿಸಿದ ಗುನ್ನೆ ಸ್ಥಳದ ಜಾಗೆಯು ಅಫಜಲಪೂರ ಪಟ್ಟಣದಲ್ಲರುವ ಡಾಃ ಸಂಗಮೇಶ ಟಕ್ಕಳಕಿ ರವರ ಖಾಸಗಿ ಆಸ್ಪತ್ರೆಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪೋಲಿಸರು ದಿಃ07.08.2021 ರಂದು ಬೆಳಗ್ಗೆ 09.0 ರಿಂದ 10.00 ಗಂಟೆ ವರೆಗೆ ಗುನ್ನೆ ಸ್ಥಳದ ಜಾಗೆಯ ಪಂಚನಾಮೆಯನ್ನು ಮಾಡಿರುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಎಸ.ಜಿ.ಎಚ. ವಕೀಲರಿಂದಃ-

ನಾನು 11-12 ವರ್ಷಗಳಿಂದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಅವಧಿಯಲ್ಲಿ ನಾನು ತಾಲೂಕ ಆರೋಗ್ಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ತಾಲೂಕ ಆರೋಗ್ಯ ವೈದ್ಯಾಧಿಕಾರಿ ಆಸ್ಪತ್ರೆಯ ಜವಾಬ್ದಾರರು ಇರುತ್ತಾರೆ ಎಂದರೆ ಸಾಕ್ಷಿಯು ಅವರು ನೇರ ಹೊಣೆಗಾರರು ಅಲ್ಲಾ , ಆಸ್ಪತ್ರೆಯ ಆಗು-ಹೋಗುಗಳಿಗೆ ಆಸ್ಪತ್ರೆಯಲ್ಲಿರುವ ಮುಖ್ಯ ವೈದ್ಯಾಧಿಕಾರಿಗಳು ನೇರ ಹೊಣೆಗಾರರು ಇರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ .

ನಾನು ಅಫಜಲಪೂರದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಲಬುರಗಿ ರವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅಧೀನಲ್ಲಿ ತಾಲೂಕ ಆರೋಗ್ಯ ಅಧಿಕಾರಿ ಇರುತ್ತಾರೆ ಎಂದರೆ ಸರಿ. ಸಾರ್ವಜನಿಕರು ವೈದ್ಯಾಧಿಕಾರಿ ವಿರುದ್ಧ ಅಥವಾ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿರುದ್ಧ ಯಾವುದೇ ದೂರು ನೀಡಬೇಕಾದರೆ ತಾಲೂಕ ಆರೋಗ್ಯ ವೈದ್ಯಾಧಿಕಾರಿ ರವರಿಗೆ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

ದಿಃ05.08.2021 ರಂದು ರೋಗಿಗಳು ನನಗೆ ದೂರು ನೀಡಿರುತಾರೆ ಎಂದರೆ ಸರಿ . ಸದರಿ ದೂರನ್ನು ನೀಡಿರುವ ರೋಗಿಗಳ ಹೆಸರನ್ನು ನನಗೆ ಹೇಳಲು ಬರುವುದಿಲ್ಲ . ನಾನು ರೋಗಿಗಳಿಗೆ ತಾಲೂಕ ಆರೋಗ್ಯ ಅಧಿಕಾರಿ ರವರಿಗೆ ದೂರನ್ನು ನೀಡಲು ಸೂಚಿಸಿರುವುದಿಲ್ಲ . ನಾನು ರೋಗಿಗಳಿಂದ ಲಿಖಿತ ರೂಪದಲ್ಲಿ ದೂರನ್ನು ನೀಡಲು ಕೇಳಿಕೊಂಡಿರುವುದಿಲ್ಲ .

ದಿಃ05.08.2021 ರ ಕ್ಕಿಂತ ಮುಂಚೆ ಸಂಗಮೇಶ ಟಕ್ಕಳಕಿ ರವರ ವಿರುದ್ದ ಡಾಃ ಸಂಗಮೇಶ ಟಕ್ಕಳಕಿ ರವರು ಖಾಸಗಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುತಾರೆಂದು ದೂರುಗಳು ಬಂದಿರುತ್ತೆವೆ . ನಾನಾಗಲಿ, ತಾಲೂಕ ಆರೋಗ್ಯ ಅಧಿಕಾರಿಯಾಗಿಲಿ ಸಂಗಮೇಶ ಟಕ್ಕಳಕಿ ರವರಿಗೆ ನೋಟಿಸ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಟಿಸ ನೀಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ . ಸದರಿ ನೋಟಿಸಗಳನ್ನು ನಾನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ . ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ದಾಳಿ ಮಾಡಲು ತಾಲೂಕ ಆರೋಗ್ಯ ಅಧಿಕಾರಿಗೆ ಮಾತ್ರ ಅಧಿಕಾರ ಇರುತ್ತದೆ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದೂ ತಾಲೂಕ ಮುಖ್ಯ ವೈದ್ಯಾಧಿಕಾರಿಗೆ ನಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಅಥವಾ ಸಿಬ್ಬಂದಿಗಳ ಕರ್ತವ್ಯ ಸುಮ್ಮುಚಿತಗೊಳಿಸಲು ಸಾಧ್ಯವಿರುವ ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿಕ್ಕೆ ತಾಲೂಕಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗೆ ಅಧಿಕಾರ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ .

ನನಗೆ ದಾಳಿ ಮಾಡುವ ಅಧಿಕಾರ ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗಮೇಶ ಆಸ್ಪತ್ರೆಯ ಒಳಗೆ ಹೋಗಿ ದಾಳಿ ಮಾಡಿರುತ್ತೇವೆ. ನಾವು ಸಂಗಮೇಶ ಟಕ್ಕಳಕಿ ಆಸ್ಪತ್ರೆಯ ಒಳಗೆ ಹೋಗಿ ನೋಡಿದಾಗ ಸಂಗಮೇಶ ಟಕ್ಕಳಕಿ ರವರು ರೋಗಿಗಳಿಗೆ ಚಿಕಿತ್ಸೆ ಕೊಡುವುದನ್ನು ನೋಡಿರುತ್ತೆವೆ ಎಂದು ನಾನು ನನ್ನ ಫಿರ್ಯಾದಿಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಫಿರ್ಯಾದಿಯಲ್ಲಿ ದಾಳಿ ಮಾಡಿದಾಗ ಯಾವ ರೋಗಿಯನ್ನು ತಪಾಸಣೆ ಮಾಡುತ್ತಿದ್ದರು ಎಂದು ನನ್ನ ಫಿರ್ಯಾದಿಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ . ನಾನು ಘಟನೆಯ ಕೃತ್ಯವನ್ನು ಚಾಸಾ-3 ರವರಗೆ ವಿಡಿಯೋಗ್ರಾಫ ಮಾಡಲು ತಿಳಿಸಿರುತ್ತೇನೆ. ಚಾಸಾ-3 ರವರು ವಿಡಿಯೋಗ್ರಾಫ ಮಾಡವುದನ್ನು ಆರೋಪಿಯು ಅಡ್ಡಿಪಡಿಸಿರುತ್ತಾರೆ. ಸಾಕ್ಷಿಯು ಮುಂದೂವರೆದು ನಾನು ಘಟನೆಯ ಕೃತ್ಯವನ್ನು ವಿಡಿಯೋಗ್ರಾಫ ಮಾಡಲು ಹೋದಾಗ ಸಹಾ ಆರೋಪಿಯು ನನಗೆ ಅಡ್ಡಿ ಪಡಿಸಿ, ನನಗೆ ಇಲ್ಲಿಂದ ಜೀವಂತ ಹೋಗುವುದಿಲ್ಲ ಎಂದು ಕೈ ಹಿಡಿದು ಹೊರಗೆ ಕಳುಹಿಸಿರುತ್ತಾರೆ . ನಾನು ನನ್ನ ಫಿರ್ಯಾದಿಯಲ್ಲಿ ಆರೋಪಿ ನನಗೆ ಜೀವಂತ ಹೋಗುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಬರೆದಿರುವುದಿಲ್ಲ ಆದರೆ ಆರೋಪಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನಾನು ನನ್ನ

ಫಿರ್ಯಾದಿಯಲ್ಲಿ ಬರೆಯಿಸಿರುತ್ತೇನೆ. ಆಸ್ಪತ್ರೆಯಲ್ಲಿ ದಿನ ನಿತ್ಯದ ನನ್ನ ಸೇವೆ ಬೆಳಗ್ಗೆ 09-00 ರಿಂದ 05.00 ಗಂಟೆ ವರೆಗೆ ಮತ್ತು ತುರ್ತು ಸೇವೆ 24 ಗಂಟೆಗಳ ಕಾಲ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಆಗಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳಿಗೆ ದಿನದ ಸೇವೆ ಸಲ್ಲಿಸಿದಾಗ ರಾತ್ರಿ ಪಾಳಿಗೆ ಸೇವೆ ಸಲ್ಲಿಸಲು ವೈದ್ಯಾಕಾರಿಗಳನ್ನು ನೇಮಕ ಮಾಡುವುದಿಲ್ಲ ಎಂದರೆ ಸಾಕ್ಷಿಯು ತುರ್ತು ಪರಿಸ್ಥಿತಿಯಲ್ಲಿ 24 ಗಂಟೆಗಳ ಕಾಲ ವೈದ್ಯರು ಸೇವೆಗೆ ಲಭ್ಯ ಇರುತ್ತಾರೆ ಎಂದು ನುಡಿಯುತ್ತಾರೆ.

ದಿಃ05.08.2021 ರಂದು ಬೆಳಗ್ಗೆ 09-00 ರಿಂದ 05.00 ಗಂಟೆ ವರೆಗೆ ಆಸ್ಪತ್ರೆಯಲ್ಲಿ ಕರ್ತವ್ಯ ಮಾಡಿರುತ್ತೇನೆ. ನಂತರ ಊಟ ಮಾಡಲು ಮನೆಗೆ ಹೋಗಿರುತ್ತೇನೆ. ನನ್ನ ಮನೆ ಅಫಜಲಪೂರದಲ್ಲಿ ಇತ್ತು ಎಂದರೆ ಸರಿ. ನನ್ನ ಆಸ್ಪತ್ರೆಗೂ ಮತ್ತು ಅಫಜಲಪೂರ ಪೋಲಿಸ ಠಾಣೆಯ ಮಧ್ಯ ಒಂದು ರಸ್ತೆ ಮಾತ್ರ ಇದೆ ಎಂದರೆ ಸರಿ. ನನ್ನ ಆಸ್ಪತ್ರೆಯಿಂದ ಅಫಜಲಪೂರ ಪೋಲಿಸ ಠಾಣೆಗೆ ಹೋಗಲು 05 ನಿಮಿಷಗಳ ಸಮಯ ಬೇಕಾಗುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ಸಮಯ 05.45 ಆಗಿದ್ದು ನ್ಯಾಯಾಲಯದ ಸಮಯಾವಧಿ ಮುಗಿದ್ದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

ಓ ಹೇ ಕೇ ಸರಿ ಇದೆ

C/c ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ